> 
>
> **‘ಸಿನಿಮಾಗಳಲ್ಲಿ ಒಳ್ಳೆಯ ಕಥೆ ಮಾಡೋದು ಬಿಟ್ಟು ಹೀರೋಗಳೇ ಸಬ್ಜೆಕ್ಟ್ ಆಗಿರೋದರಿಂದ ಇಂತಹ ಸಮಸ್ಯೆಗಳು ಹುಟ್ಟುತ್ತವೆ. ನಿರ್ಮಾಪಕರು ತಂತ್ರಜ್ಞರಿಗೆ ಮರ್ಯಾದೆ ಕೊಡಲಿ. ಮೊದಲು ಒಳ್ಳೆಯ ಸಿನಿಮಾ ತೆಗೆಯಲಿ’**
>
> – ಟಿ.ಎಸ್.ನಾಗಾಭರಣ

‘ಸಿನಿಮಾಗಳಲ್ಲಿ ಒಳ್ಳೆಯ ಕಥೆ ಮಾಡೋದು ಬಿಟ್ಟು ಹೀರೋಗಳೇ ಸಬ್ಜೆಕ್ಟ್ ಆಗಿರೋದರಿಂದ ಇಂತಹ ಸಮಸ್ಯೆಗಳು ಸಹಜ. ನಾವು ತಂತ್ರಜ್ಞರಿಗೆ ಮರ್ಯಾದೆ ಕೊಡಲ್ಲ. ಗುಣಮಟ್ಟದ ಸಿನಿಮಾ ಬರಬೇಕಾದರೆ ಉತ್ತಮ ತಂತ್ರಜ್ಞರೇ ಮುಖ್ಯ. ನಿರ್ಮಾಪಕರು ಇದನ್ನು ಮೊದಲು ಅರ್ಥ ಮಾಡಿಕೊಳ್ಳಬೇಕು’ ಎನ್ನುವುದು ನಾಗಾಭರಣರ ಸ್ಪಷ್ಟನುಡಿ.

ನಾಗಾಭರಣ ಅವರು ಹೇಳುವ ವಾದವನ್ನು ಸಮರ್ಥಿಸಲು ಅನೇಕ ಉದಾಹರಣೆಗಳು ಸಿಗುತ್ತವೆ. ಇತ್ತೀಚಿನ ದಿನಗಳಲ್ಲಿ ಅತ್ಯಂತ ಹೆಚ್ಚು ಸುದ್ದಿ ಮಾಡಿ ಥಿಯೇಟರ್‌ಗಳಲ್ಲೂ ಚೆನ್ನಾಗಿ ಕಲೆಕ್ಷನ್ ಮಾಡಿದ ಸಿನಿಮಾ– ತಿಥಿ. ಅದರಲ್ಲಿ ಯಾವ ಸೂಪರ್ ಹೀರೋಗಳಿದ್ದರು? ಚಿತ್ರಕಥೆಯೇ ಹೀರೋ ಆಗಿ ಮೆರೆದ ಚಿತ್ರವದು. ಟೀವಿಗಳಲ್ಲಿ ಸಾಕಷ್ಟು ಜನಪ್ರಿಯ ರಿಯಾಲಿಟಿ ಷೋಗಳು ನಡೆಯುತ್ತಿದ್ದ ಅವಧಿಯಲ್ಲೇ ಈ ಸಿನಿಮಾ ಹೇಗೆ ಯಶಸ್ವಿಯಾಗಿ ಪ್ರದರ್ಶನ ಕಂಡಿತು? ನಗರ– ಗ್ರಾಮೀಣ ಎನ್ನದೆ ಜನರನ್ನು ಹೇಗೆ ಸೆಳೆಯಿತು? ಯೂ ಟರ್ನ್, ಗೋಧಿ ಬಣ್ಣ..., ಕಿರಗೂರಿನ ಗಯ್ಯಾಳಿಗಳು ಮುಂತಾದ ಸಿನಿಮಾಗಳೂ ಯಶಸ್ವಿ ಕಲೆಕ್ಷನ್ ಕಂಡಿತಲ್ಲ? ಜನ ಟೀವಿ ರಿಯಾಲಿಟಿ ಷೋಗಳನ್ನು ಬಿಟ್ಟುಬಂದು ಈ ಸಿನಿಮಾಗಳನ್ನು ನೋಡಿದರಲ್ಲ? ರಿಯಾಲಿಟಿ ಷೋಗಳ ಮಧ್ಯೆಯೇ, ಸುದೀಪ್ ಅವರ ‘ಕೋಟಿಗೊಬ್ಬ–2’ ಸಿನಿಮಾ ಅತ್ಯುತ್ತಮ ಬಾಕ್ಸಾಫೀಸ್ ಕಲೆಕ್ಷನ್ ಮಾಡಿದೆಯಲ್ಲ?

ಹಾಗೆ ನೋಡಿದರೆ ಇದು ಇವತ್ತಿನ ಟ್ರೆಂಡ್ ಎಂದಲ್ಲ. ಹತ್ತು ವರ್ಷಗಳ ಹಿಂದೆ ‘ಮುಂಗಾರು ಮಳೆ’ ಸಿನಿಮಾ ಥಿಯೇಟರ್‌ಗಳಲ್ಲಿ ಅತ್ಯದ್ಭುತ ಯಶಸ್ಸು ಕಂಡಾಗ ಟೀವಿಯಲ್ಲಿ ‘ಮಾಯಾಮೃಗ’ ಸೀರಿಯಲ್‌ಅನ್ನು ಜನ ಅಷ್ಟೇ ಪ್ರೀತಿಯಿಂದ ಕುಳಿತು ನೋಡುತ್ತಿದ್ದರು. ಗುಣಮಟ್ಟದ್ದು, ತಮಗೆ ಪ್ರಿಯವೆನಿಸುವಂತಹದ್ದು ಬಂದಾಗ ಕನ್ನಡದ ಪ್ರೇಕ್ಷಕರು ಅದನ್ನು ನೋಡುವುದಕ್ಕೆ ಹಿಂದೆ ಮುಂದೆ ನೋಡಿಲ್ಲ. ಅವರು ಕಿರುತೆರೆ– ಹಿರಿತೆರೆ ಎನ್ನುವ ಭೇದಭಾವ ಮಾಡಿಲ್ಲ.

ಹಾಗೆಂದು ಚಿತ್ರರಂಗದ ಎಲ್ಲ ನಟ– ನಟಿಯರೂ ಈ ವಿವಾದದ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಸದ್ಯಕ್ಕೆ ನಿರ್ಮಾಪಕರ ಸಮಸ್ಯೆ ಎಂದಷ್ಟೇ ಇದು ಬಿಂಬಿತವಾಗುತ್ತಿದೆ. ಉಳಿದವರು ಪ್ರತಿಕ್ರಿಯೆಯಿಂದಲೂ ದೂರ ಉಳಿದಿದ್ದಾರೆ. ಕಿರುತೆರೆ ಧಾರಾವಾಹಿಗಳಲ್ಲಿ ಸುಪ್ರಸಿದ್ಧರಾಗಿ, ಇತ್ತೀಚೆಗೆ ‘ಡ್ರಾಮಾ ಜ್ಯೂನಿಯರ್ಸ್’ ರಿಯಾಲಿಟಿ ಷೋ ನಲ್ಲಿ ತೀರ್ಪುಗಾರರಾಗಿ ಮಿಂಚಿದ ‘ಮಾಯಾಮೃಗ’ದ ನಿರ್ದೇಶಕ ಟಿ.ಎನ್.ಸೀತಾರಾಮ್ ಅವರನ್ನು ಈಗಿನ ವಿವಾದದ ಬಗ್ಗೆ ಕೇಳಿದರೆ, ಅವರು ಹೇಳಿದ್ದು ಇಷ್ಟೇ– ‘ಈ ಬಗ್ಗೆ ಮಾತನಾಡಲು



ಝೀ ಕನ್ನಡದ ವೀಕೆಂಡ್ ವಿದ್ ರಮೇಶ್‌ನಲ್ಲಿ
ರಮೇಶ್ ಅರವಿಂದ್